MUNSIFF-MAGISTRATE'S COURT AT TALUK HEADQUARTERS

43. SRI S. KARIYAPPA.—(Kanakapura).—

Will the Minister for Law and Parliamentry Affairs be Pleased to State :—

(*a*) whether the Government inte-d to open Munsiff Magist. rate Courts in all the important taluk headquarters ;

(*b*) the names of taluks in which such courts are opened ;

(*c*) the steps taken to open one such Court at Kanakapura ?

SRI D. K. NAIKAR.—(Minister for Law and Parlimentary Affairs)

(*a*) Yes Wherever work-load for establishment of Munsif Magistrate's Court at a taluk head-quarter is found sufficient, actionf is being taken by the Government to establish such Court for the convenience of the litigant public at such taluk head.quarter on the recommendation of the High Court.

(*b*) *Vide* Statement appended.

(*c*) The matter is not before Government.

STATEMENT

Showing the names of Taluk headquarters where Munsiff-Magistrates' Courts have been established having jurisdiction over the respective Taluk.

Sl. No.	Name of the Taluk headquarters where Munsiff-Magistrates' Courts have been established	Sl. No.	Name of the Taluk headquarters where Munsiff-Magistrates' Courts have been established.
1	Gokak	28	Ron
2	Hukkeri	29	Chincholi
3	Khanapur	30	Alland
4	Ramdurg	31	Chittapur
5	Saunddatti	32	Sedam
6	Hadagalli	33	Yadgir
7	Kudligi	34	Arsikere
8	Bidar	35	Channarayapatna
9	Aurad	36	Holenarasipur
10	Basavakalyan	37	Bhatkal
11	Bhalki	38	Siddapur
12	Humnabad	39	Belthangady
13	Badami	40	Buntwal
14	Basavana-Bagewadi	41	Krishanarajpet
15	Hungund	42	T Narasipur
16	Indi	43	Krishnarajanagar
17	Jamkhandi	44	Kollegal
18	Muddebihal	45	Raichur
19	Mudhol	46	Deodurga
20	Sindgi	47	Gangavathi
21	Kadur	48	Koppal
22	Tarikere	49	Lingsugur
23	Hosadurga	50	Manvi
24	Virajpet	51	Sindhanoor
25	Hangal	52	Yelburga
26	Haveri	53	Kunigal
27	Kundgol	54	Pavagada

ಶ್ರೀ ಎಸ್. ಕರಿಯಪ್ಪ.— ಕನಕಪುರ ಮತ್ತು ಆನೇಕಲ್ ತಾಲ್ಲೂಕ್‌ಗಳಲ್ಲಿ ಮುನ್ಸೀಫ್ ಮ್ಯಾಜಿ ಸ್ಟ್ರೇಟ್ ಕೋರ್ಟ್‌ಗಳನ್ನು ತೆಗೆಯಬೇಕಾದರೆ ಯೋಗ್ಯವಾದ ಕಟ್ಟಡ ಇದೆಯೇ ಎನ್ನುವುದನ್ನು ಅಲ್ಲಿಗೆ ಹೋಗಿ ಡಿಸ್ಟ್ರಿಕ್ಟ್ ಮತ್ತು ಸೆಷನ್ ಜಡ್ಜ್‌ಗಳನ್ನು ನೋಡಿಕೊಂಡು ಬಂದಿಲ್ಲವೇ?

ಶ್ರೀ ಡಿ. ಕೆ. ನಾಯ್ಕರ್.— ಅದು ಈಗ ಸರ್ಕಾರದ ಗಮನಕ್ಕೆ ಬಂದಿಲ್ಲ, ಒಂದುವೇಳೆ ಇದ್ದರೆ ಹೈಕೋರ್ಟಿನ ಅಂತದಲ್ಲಿ ಇರಬಹುದು.

ಶ್ರೀ ಎಸ್ ಕರಿಯಪ್ಪ.— ಈಗ ಅವರು ನೋಡಿಕೊಂಡು ಬಂದು ಆಗಲೇ ೪-೫ ತಿಂಗಳು ಆಗಿದ ಇದುವರೆಗೂ ಪೂರ್ತಿ ಆಗದೇ ಇರುವುದಕ್ಕೆ ಕಾರಣ ಏನು ಎನ್ನುವುದನ್ನು ವಿಮರ್ಶೆ ಮಾಡಿ ನೋಡುತ್ತೀರಾ?

ಶ್ರೀ ಡಿ ಕೆ. ನಾಯ್ಕರ್.— ನಮ್ಮಲ್ಲಿ ಹೈಕೋರ್ಟಿನಿಂದ ಸಿಫಾರಸು ಬಂದ ಹಾಗೆ ಆವನ್ನು ಮಂಜೂರು ಮಾಡುವುದಕೋಸ್ಕರ ಫೈನಾನ್ಷಿಯಲ್ ಕನ್‌ಕರೆನ್ಸ್‌ಗೆ ಕಳುಹಿಸುವಂಥ ರೂಢಿ ಇದೆ. ಅದು ಹೈಕೋರ್ಟಿನಿಂದ ಬಂದ ನಂತರ ಕಳುಹಿಸುತ್ತೇವೆ, ಇದುವರೆಗೂ ಯಾತಕ್ಕೆ ಬಂದಿಲ್ಲ ಎನ್ನುವುದನ್ನು ಈಗ ಹೇಳುವುದಕ್ಕಾಗುವುದಿಲ್ಲ.

SRI D. B. KALMANKAR — Since many suggestions and requests have been made to the Government to open some new courts in taluk headquarters, will the Government consider to open new courts in taluk headquarters and particularly in Gulbarga.

MADAM SPEAKER.— That supplementary does not arise out of this Question.

ಶ್ರೀ ಎಚ್. ಜಿ. ಚನ್ನಪ್ಪ.— ಸ್ವಾಮಿ ಮಾಗಡಿ ತಾಲ್ಲೂಕಿನಲ್ಲಿ ಒಂದು ಮುನ್ಸಿಫ್ ಮ್ಯಾಜಿಸ್ಟ್ರೇಟರ ಕೋರ್ಟನ್ನು ತೆಗೆಯುವ ವಿಷಯದಲ್ಲಿ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ?

(ಉತ್ತರ ಇಲ್ಲ)

ಶ್ರೀ ಎಸ್. ಕರಿಯಪ್ಪ. — ಆ ವಿಷಯದಲ್ಲಿ ವಿಮರ್ಶೆ ಮಾಡಿ ಮಾಗಡಿ, ಆನೇಕಲ್ ಕನಕಪುರದಲ್ಲಿ ಮ್ಯಾಜಿಸ್ಟ್ರೇಟ್ ಕೋರ್ಟ್ ಆಗಬೇಕು ಎನ್ನುವ ಬಗ್ಗೆ ಸರ್ಕಾರಕ್ಕೆ ರಿಪೋರ್ಟ್ ಬಂದು ಸೆಷನ್ ಜಡ್ಜ್ ಹೋಗಿ ನೋಡಿದ ಮೇಲೆ ಕೂಡ ಇಷ್ಟೊಂದು ತಡವಾಗುವುದಕ್ಕೆ ಕಾರಣವೇನು?

ಶ್ರೀ ಡಿ. ಕೆ ನಾಯ್ಕರ್ — ಹಿಂದಕ್ಕೆ ಒಂದು ಸಲ ಆ ತರಹ ಹೈಕೋರ್ಟಿನವರು ಚೌಕಾಸಿ ಮಾಡಿದಾಗ ಬಿಲ್ಡಿಂಗ್ ಅಕಾಮಡೇಷನ್ ಇಲ್ಲ ಎಂದು ಹೇಳಿ ಕೋರ್ಟ್ ಎಸ್ಟಾಬ್ಲಿಷ್‌ಮೆಂಟ್ ಮಾಡುವ ವಿಷಯ ಡೆಫರ್ ಮಾಡಿದ್ದಾರೆಂದು ತಿಳಿದು ಬಂದಿದೆ.

ಶ್ರೀ ಟಿ. ಎಂ. ಮಂಜುನಾಥ್.— ತಿಪಟೂರ್‌ನಲ್ಲಿ ಒಂದು ಮ್ಯಾಜಿಸ್ಟ್ರೇಟ್ ಕೋರ್ಟ್ ಬೇಕು ಎಂದು ವಕೀಲರ ಸಂಘದಿಂದ ಸರ್ಕಾರಕ್ಕೆ ಮನವಿ ಬಂದಿಲ್ಲವೇ?

ಅಧ್ಯಕ್ಷರು.— ಅದು ಇಲ್ಲಿ ಬರುವುದಿಲ್ಲ.

ಶ್ರೀ ವಿ. ಎಸ್. ಪಾಟೀಲ್.— ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಕೋರ್ಟ್‌ಗಳನ್ನು ತೆಗೆಯಬೇಕೆಂದು ಇಟ್ಟುಕೊಂಡಿದ್ದೀರಾ? ಸ್ಕೂಲ್ ಕಟ್ಟಡ ಇಲ್ಲದೆ ಸ್ಕೂಲ್‌ಗಳನ್ನು ಮರದ ಕೆಳಗೆ ನಡೆಸಿ ಶಿಕ್ಷಣ ಕೊಡುವ ಪದ್ಧತಿಯಿರುವಾಗ ನ್ಯಾಯಾಲಯಕ್ಕೆ ಸಣ್ಣ ಬಿಲ್ಡಿಂಗ್ ಸಿಕ್ಕಿದ ಮೇಲೆ ಅಲ್ಲಿ ಕೋರ್ಟ್‌ಗಳನ್ನು ಎಸ್ಟಾಬ್ಲಿಷ್ ಮಾಡುವುದಕ್ಕೆ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೀರಾ?

ಶ್ರೀ ಡಿ. ಕೆ. ನಾಯ್ಕರ್.— ಕೋರ್ಟ್‌ಗಳನ್ನು ಒಂದೊಂದು ತಾಲ್ಲೂಕಿನಲ್ಲಿ ತೆಗೆಯಬೇಕಾದರೆ ಸಾಕಾದಷ್ಟು ಡಿಸ್ಪೋಸ್ ಮಾಡುವ ವರ್ಕ್ ಇರಬೇಕು ಎಂದು ಇದೆ, ಅದೇ ಪ್ರಕಾರ ಸರಿಯಾದ ಬಾರ್ ವಂತ್ತು ಅಡ್ವೊಕೇಟ್‌ಗಳ ಸಂಖ್ಯೆ ಇರಬೇಕು ಎಂದು ಇದೆ ಕೋರ್ಟ್ ಟೆಂಪಲ್ ಆಫ್ ಜಸ್ಟೀಸ್ ಎಂದು ಇದೆ. ಆದುದರಿಂದ ಒಂದು ಬಿಲ್ಡಿಂಗ್ ಸಿಕ್ಕಿದರೂ ಸಾಕು ಅಲ್ಲಿ ತೆಗೆಯುವ ಕ್ರಮ ಸರ್ಕಾರ ಇಟ್ಟುಕೊಂಡಿದೆ. ಪಬ್ಲಿಕ್ ಕನ್‌ವೀನಿಯನ್ಸ್‌ಗೆ ಅಲ್ಲಲ್ಲಿ ಕೋರ್ಟ್‌ಗಳನ್ನು ಕೊಡುವ ಧೋರಣೆ ಸರ್ಕಾರದ ಗಮನದಲ್ಲಿದೆ.

ಶ್ರೀ ಎನ್ ಜಿ. ಹಾಲಪ್ಪ.— ವರ್ಕ್ ಲೋಡ್ ನೋಡಿಕೊಂಡು ಕೋರ್ಟ್‌ಗಳನ್ನು ಕೊಡುತ್ತೇವೆಂದು ಹೇಳಿದಿರಿ.

ಶ್ರೀ ಡಿ. ಕೆ. ನಾಯ್ಕರ್.— ಒಂದು ಮುನ್ಸೀಫ್ ಕೋರ್ಟ್ ಸಾಧಾರಣವಾಗಿ ೩ ನೂರು ೫ ನೂರು ಸೀಟು ಗಳು ಡಿಸ್‌ಪೋಜ್ ಮಾಡುವ ಪರಿಪಾಠವಿದೆ. ಮೆಜಿಸ್ಟ್ರೇಟ್ ಕಂ ಮುನ್ಸೀಪ್ ಕೋರ್ಟ್‌ಗೆ ೩೦೦ ಕೇಸ್ ಗಳು ಕ್ರಿಮಿನಲ್ ಐ.ಪಿ.ಸಿ. ಕೇಸ್‌ಗಳು ಅಡಿಷನಲ್ ವರ್ಕ್ ಇದ್ದಲ್ಲಿ ಮಾತ್ರ ಕೊಡುತ್ತೇವೆ.

ಶ್ರೀ ಟಿ. ಎಂ ಮಂಜುನಾಥ್. — ತಿಪಟೂರಿನಲ್ಲಿ ಲೇವಾದೇವಿಗಾರರು ಜಾಸ್ತಿ ಇದ್ದಾರೆ. ೧೦ ಸಾವಿರ ರೂಪಾಯಿಗೆ ಲೇವಾದೇವಿ ಮಾಡಬೇಕಾದರೆ ತುಮಕೂರಿಗೆ ಬರಬೇಕಾಗಿರುವುದರಿಂದ ತಿಪಟೂರಿನಲ್ಲಿ ಸೆಷನ್ಸ್ ಕೋರ್ಟ್ ಕೊಡಬೇಕೆಂದು ಮನವಿ ಕೊಟ್ಟಿದ್ದರು. ಸರ್ಕಾರದವರು ಎಷ್ಟರಮಟ್ಟಿಗೆ ಅದನ್ನು ಪರಿಶೀಲನೆ ಮಾಡಿದ್ದಾರೆ. ಅಲ್ಲಿಗೆ ಮ್ಯಾಜಿಸ್ಟ್ರೇಟ್ ಕೋರ್ಟ್ ಕೊಡತಕ್ಕ ಅಭಿಪ್ರಾಯ ಸರ್ಕಾರಕ್ಕೆ ಇದೆಯೇ?